**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**

ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक–संस्कृत–विश्वविद्यालय:**

श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

**ಸಂಖ್ಯೆ: ಕಸಂವಿ/ಅ.ನಾ/ಪ.ಬಿ.ಎ.ಹಾಗೂ ಎಂ.ಎ/ದಾ.ಪ್ರ.ಕ/2022–23** **ದಿನಾಂಕ: 17/06/2022**

## ಪರಿಷ್ಕೃತ ಅಧಿಸೂಚನೆ (ಪರಿಸರ)

**ವಿಷಯ: 2022–23 ನೇ ಶೈಕ್ಷಣಿಕ ಸಾಲಿನ ಪರಿಸರದ ಬಿ.ಎ ಹಾಗೂ ಎಂ.ಎ ತರಗತಿ ವಿದ್ಯಾರ್ಥಿಗಳ ಪ್ರವೇಶಾತಿಗಾಗಿ UUCMS ಮುಖಾಂತರ Online –ನಲ್ಲಿ ಅರ್ಜಿ ಸಲ್ಲಿಸುವ ಬಗೆಗೆ .**

**ಉಲ್ಲೇಖ :–ಸರ್ಕಾರಿ ಆದೇಶ ಸಂಖ್ಯೆ:ಇಡಿ34ಇಜಿಓವಿ2020 ದಿನಾಂಕ:–13.06.2022.**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2022–23 ನೇ ಶೈಕ್ಷಣಿಕ ಸಾಲಿನ ಅವಧಿಗೆ ಸಂಸ್ಕೃತ **ಬಿ.ಎ** ಮತ್ತು ಸಂಜೆ ಕಾಲೇಜು ಬಿ.ಎ.ಪ್ರಥಮ ಹಾಗೂ ಬಿ.ಎ.ಶಾಸ್ತ್ರ & ಸಂಸ್ಕೃತ **ಎಂ.ಎ** ಪದವಿಗಳ **ಪ್ರವೇಶಾತಿಗಾಗಿ UUCMS ಮುಖಾಂತರ ಆನ್‌ಲೈನ್–ನಲ್ಲಿಯೇ ಅರ್ಜಿ** ಕಡ್ಡಾಯವಾಗಿ ಪ್ರವೇಶಾತಿ ನೀಡಬೇಕೆಂದು ಉಲ್ಲೇಖಿತ ಸರ್ಕಾರಿ ಆದೇಶದಲ್ಲಿ ತಿಳಿಸಿರುವುದರಿಂದ ಸಂಸ್ಕೃತ ಬಿ.ಎ. ಮತ್ತು ಸಂಸ್ಕೃತ ಎಂ.ಎ ಪ್ರಥಮ ವರ್ಷದ ಪ್ರೊಗ್ರಾಂಗಳಿಗೆ ಪ್ರವೇಶಾತಿ ಬಯಸಿ ಬರುವ ಅರ್ಹ ವಿದ್ಯಾರ್ಥಿಗಳಿಗೆ **UUCMS** Portal ನಲ್ಲಿ Online ನಲ್ಲಿಯೇ ಅರ್ಜಿ ಸಲ್ಲಿಸುವಂತೆ ಈ ಮೂಲಕ ಸೂಚಿಸಲಾಗಿದೆ.

**ಆವೇದನ ಪತ್ರ ಸಲ್ಲಿಸಲು ಕೊನೆಯ ದಿನಾಂಕ:– 30/06/2022**

1. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2022–23 ನೇ ಶೈಕ್ಷಣಿಕ ಸಾಲಿನ ಅವಧಿಗೆ ಈ ಕೆಳಕಂಡ ಕೋರ್ಸ್‌ಗಳನ್ನು ಆರಂಭಿಸಿದೆ.

| ಕ್ರ.ಸಂ | ತರಗತಿಗಳು | ಅರ್ಹತೆ |
|---|---|---|
| **1** | ಸಂಸ್ಕೃತ – ಬಿ.ಎ (ಸಾಮಾನ್ಯ ಸಂಸ್ಕೃತ) ಸಂಜೆ ಕಾಲೇಜು ಬಿ.ಎ.ಪ್ರಥಮ & ಶಾಸ್ತ್ರ ಬಿ.ಎ.ಪ್ರಥಮ<br>**Admission Only Through UUCMS** | **ಬಿ.ಎ ತರಗತಿ**<br>(ಪರಿಸರ, ಸಂಜೆ ಕಾಲೇಜು & ಶಾಸ್ತ್ರ ಬಿ.ಎ ಎಂಬ ಮೂರು ವಿಭಾಗಗಳಲ್ಲಿ ಆರಂಭಗೊಳ್ಳುತ್ತದೆ.)<br>1. ಪಿ.ಯು.ಸಿ, ಸಾಹಿತ್ಯ, ಅಥವಾ ತತ್ಸಮಾನ ತರಗತಿಗಳಲ್ಲಿ ಸಂಸ್ಕೃತವನ್ನು ಭಾಷೆಯಾಗಿ ಆಯ್ಕೆ ಮಾಡಿಕೊಂಡವರು<br>2. ಸಂಸ್ಕೃತರಹಿತ ಪದವಿ ಪೂರ್ವ ಶಿಕ್ಷಣ/ತತ್ಸಮಾನ ಶಿಕ್ಷಣ ಪಡೆದ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯವು ನಡೆಸುವ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣತೆ |
| **2** | **ಸಂಸ್ಕೃತ ಭಾಷೆ ಮತ್ತು ಸಾಹಿತ್ಯ ವಿಭಾಗ**<br>**Admission Only Through UUCMS**<br>**ಅಲಂಕಾರ ವಿಭಾಗ**<br>**Admission Only Through UUCMS**<br>**ಹಸ್ತಪ್ರತಿಶಾಸ್ತ್ರ ವಿಭಾಗ**<br>**Admission Only Through UUCMS**<br>**ನ್ಯಾಯ & ವೈಶೇಷಿಕ ವಿಭಾಗ**<br>**Admission Only Through UUCMS**<br>**ವ್ಯಾಕರಣ ವಿಭಾಗ**<br>**Admission Only Through UUCMS**<br>**ವೇದಾಂತ ವಿಭಾಗ**<br>**Admission Only Through UUCMS** | **ಎಂ.ಎ ತರಗತಿ**<br>1. ಸಂಸ್ಕೃತ ವಿಷಯ + ಯಾವುದೇ ಪದವಿ<br>2.ಸಂಸ್ಕೃತ ಸಾಹಿತ್ಯ ಪರೀಕ್ಷೆಯಲ್ಲಿ ಉತ್ತೀರ್ಣತೆ+ ಯಾವುದೇ ಪದವಿ,<br>3.ಸಂಸ್ಕೃತ/ಪಾಲಿ/ಪ್ರಾಕೃತ/ಹಸ್ತಪ್ರತಿಶಾಸ್ತ್ರಗಳ ಸರ್ಟಿಫಿಕೇಟ್/ಡಿಪ್ಲೋಮಾ + ಯಾವುದೇ ಪದವಿ,<br>4.ಸುರಸರಸ್ವತೀ ಸಭೆ, ಶೃಂಗೇರಿ ಇವರ'ಪ್ರವೇಶ' ಪರೀಕ್ಷೆಯಲ್ಲಿ ಉತ್ತೀರ್ಣತೆ + ಯಾವುದೇ ಪದವಿ<br>5.ಸಂಸ್ಕೃತ ಭಾರತೀಯ ಕೋವಿದ/ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣತೆ + ಯಾವುದೇ ಪದವಿ<br>6.ಯಾವುದೇ ಪದವಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು ಸಂಸ್ಕೃತ ವಿಶ್ವವಿದ್ಯಾಲಯವು ನಡೆಸುವ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣತೆ.<br>(ಮೇಲ್ಕಂಡ ವಿದ್ಯಾರ್ಹತೆ ಹೊಂದಿದ ಅಭ್ಯರ್ಥಿಗಳು ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ.) |

2. ಸರ್ಕಾರದ ಆದೇಶದಂತೆ, 2022–23 ನೇ ಸಾಲಿನ ಸಂಸ್ಕೃತ **ಬಿ.ಎ** ಮತ್ತು ಸಂಜೆ ಕಾಲೇಜು ಬಿ.ಎ.ಪ್ರಥಮ ಹಾಗೂ ಬಿ.ಎ.ಶಾಸ್ತ್ರ ಮತ್ತು ಸಂಸ್ಕೃತ **ಎಂ.ಎ** ಪದವಿಗಳ ಪ್ರವೇಶಾತಿಯು ಆನ್‌ಲೈನ್ ಮೂಲಕವೇ ನಡೆಯಲಿದೆ.

3. ಆನ್‌ಲೈನ್ ಪ್ರವೇಶಾತಿ ಸಂಬಂಧ ವಿಶ್ವವಿದ್ಯಾಲಯದಲ್ಲಿ Help Disk ಸ್ಥಾಪಿಸಲಾಗಿದೆ, ಪ್ರವೇಶಾತಿಗೆ ಬರುವ ವಿದ್ಯಾರ್ಥಿಗಳಿಗೆ NEP ಅನುಸಾರ ಕಳೆದ ಶೈಕ್ಷಣಿಕ ಸಾಲಿನಲ್ಲಿ ಜಾರಿಯಲ್ಲಿದ್ದ Model Structure ನಂತೆ ವಿಷಯಗಳ ಬಗ್ಗೆ ವಿವರಣೆ ನೀಡಲು ವಿಶ್ವವಿದ್ಯಾಲಯದ ವೆಬಸೈಟ್‌ಲಿರುವ ಈ Help Disk ಸಹಾಯವನ್ನು ಪಡೆಯಲು ಸೂಚಿಸಲಾಗಿದೆ.

4. ದಿನಾಂಕ: 18.06.2022 ರಿಂದ **UUCMS** ನಲ್ಲಿ UG-PG Admission Portal ತೆರೆಯಲಿದ್ದು ಅರ್ಜಿ ಸಲ್ಲಿಸುವಂತೆ ವಿದ್ಯಾರ್ಥಿಗಳಿಗೆ ಸೂಚಿಸಲಾಗಿದೆ.

5.ಆಯಾ ವಿಭಾಗಗಳ ಹಿಂದಿನ ಶೈಕ್ಷಣಿಕ ಸಾಲಿನಲ್ಲಿ First-Cum-First Serve ಪ್ರಕಾರ ಪ್ರವೇಶಾತಿ ಸೌಲಭ್ಯವನ್ನು ಸಹ **UUCMS** ನಲ್ಲಿ ಅವಕಾಶ ಕಲ್ಪಿಸಿರುವುದರಿಂದ ನಿಗಧಿತ ಸಮಯದೊಳಗೆ ಪ್ರವೇಶಾತಿ ಪಡೆದುಕೊಳ್ಳಲು ಸೂಚಿಸಿದೆ.

6.ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವೆಬ್‌ಸೈಟ್‌ಲ್ಲಿ https:/uucms.karnataka.gov.in/ ಈ Portal ಗೆ ಲಿಂಕ್ ನೀಡಿ ವಿದ್ಯಾರ್ಥಿಗಳು/ಪೋಷಕರುಗಳು ಮಾಹಿತಿಯನ್ನು ಪಡೆದುಕೊಳ್ಳಲು ವ್ಯವಸ್ಥೆ ಮಾಡಲಾಗಿದೆ.

7.ಆನ್‌ಲೈನ್‌ನಲ್ಲಿ ದಾಖಲಾತಿ ಪ್ರಕ್ರಿಯೆಯನ್ನು ಸಮರ್ಪಕವಾಗಿ ನಿರ್ವಹಿಸುವಂತೆ ಸೂಚಿಸಿದೆ.

8.ಬಿ.ಎ ಮತ್ತು ಎಂ.ಎ. ತರಗತಿಗಳು ಸೆಮಿಸ್ಟರ್ ಪದ್ಧತಿಯಲ್ಲಿ ನಡೆಯುತ್ತವೆ.

9. ಬಿ.ಎ.ದ್ವಿತೀಯ & ತೃತೀಯ ವರ್ಷದ ವಿದ್ಯಾರ್ಥಿಗಳು ಹಾಗೂ ಎಂ.ಎ ದ್ವಿತೀಯ ವರ್ಷದ ವಿದ್ಯಾರ್ಥಿಗಳು ಕೆಳಗೆ ಕೊಟ್ಟಿರುವ GOOGLE LINK ನ್ನು ಉಪಯೋಗಿಸಿಕೊಂಡು ಪ್ರವೇಶ ಅರ್ಜಿಯನ್ನು ಭರ್ತಿ ಮಾಡಿ ಸೂಚಿಸಿರುವ ನಿಗದಿತ ದಿನಾಂಕದೊಳಗೆ ಸಮಗ್ರ ದಾಖಲೆಗಳೊಂದಿಗೆ ಒಂದು ಪ್ರತಿಯನ್ನು ವಿಶ್ವವಿದ್ಯಾಲಯದ **ಅಧ್ಯಯನಾಂಗದ ವಿಭಾಗಕ್ಕೆ** ಸಲ್ಲಿಸಬೇಕು.(https://forms.gle/GrRbYZTWAx4PyiCn8 )

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2022–23 ನೇ ಶೈಕ್ಷಣಿಕ ಸಾಲಿನ ಅವಧಿಗೆ **ಸರ್ಟಿಫಿಕೇಟ್ ಕೋರ್ಸ್, ಡಿಪ್ಲೋಮಾ ಕೋರ್ಸ್** & **ಪಿ.ಜಿ. ಡಿಪ್ಲೋಮಾ ಕೋರ್ಸ್**ಗಳಿಗಾಗಿ ಅರ್ಹ ವಿದ್ಯಾರ್ಥಿಗಳಿಂದ ಆವೇದನಾ ಪತ್ರವನ್ನು ಆಹ್ವಾನಿಸಿದೆ. ಶುಲ್ಕವನ್ನು ಪಾವತಿಸುವ ಕುರಿತು ನಂತರದ ದಿನಗಳಲ್ಲಿ ಮಾಹಿತಿಯನ್ನು ನೀಡಲಾಗುವುದು. GOOGLE LINK ನ್ನು ಉಪಯೋಗಿಸಿಕೊಂಡು ಪ್ರವೇಶ ಅರ್ಜಿಯನ್ನು ಭರ್ತಿ ಮಾಡಿ ಸೂಚಿಸಿರುವ ನಿಗದಿತ ದಿನಾಂಕದೊಳಗೆ ಸಮಗ್ರ ದಾಖಲೆಗಳೊಂದಿಗೆ ಒಂದು ಪ್ರತಿಯನ್ನು ವಿಶ್ವವಿದ್ಯಾಲಯದ **ಅಧ್ಯಯನಾಂಗದ ವಿಭಾಗಕ್ಕೆ** ಸಲ್ಲಿಸಬೇಕು.

**ಆವೇದನ ಪತ್ರ ಸಲ್ಲಿಸಲು ಕೊನೆಯ ದಿನಾಂಕ:30/06/2022**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2022–23 ನೇ ಶೈಕ್ಷಣಿಕ ಸಾಲಿನ ಅವಧಿಗೆ ಈ ಕೆಳಕಂಡ ಕೋರ್ಸ್‌ಗಳನ್ನು ಆರಂಭಿಸಿಲಾಗಿದೆ

| ಕ್ರ.ಸಂ | ತರಗತಿಗಳು | ಅರ್ಹತೆ |
|---|---|---|
| 1. | **ಸರ್ಟಿಫಿಕೇಟ್ ಕೋರ್ಸ್‌ಗಳು:**<br>(ಸಂಸ್ಕೃತ ಭಾಷಾ ಅದ್ವೈತ ವೇದಾಂತ & ಯೋಗ ಸರ್ಟಿಫಿಕೇಟ್ ಕೋರ್ಸ್ ಎಂದು ಮೂರು ವಿಷಯಗಳಲ್ಲಿ ಪ್ರವೇಶ ಪಡೆಯಬಹುದು.)<br>**Admission Only Through Google Link** | ಕನಿಷ್ಠ ಪಿ.ಯು.ಸಿ ಅಥವಾ ತತ್ಸಮಾನ ತರಗತಿಯಲ್ಲಿ ತೇರ್ಗಡೆ. |
| 2. | **ಡಿಪ್ಲೋಮಾ ಕೋರ್ಸ್‌ಗಳು:**<br>(ಸಂಸ್ಕೃತ **ಡಿಪ್ಲೋಮಾ** & ಯೋಗ **ಡಿಪ್ಲೋಮಾ** ಕೋರ್ಸ್ ಎಂದು ಎರಡು ವಿಷಯಗಳಲ್ಲಿ ಪ್ರವೇಶ ಪಡೆಯಬಹುದು.)<br>**Admission Only Through Google Link** | ಕನಿಷ್ಠ ಪಿ.ಯು.ಸಿ ಅಥವಾ ತತ್ಸಮಾನ ತರಗತಿಯಲ್ಲಿ ತೇರ್ಗಡೆ. |
| 3. | **ಪಿ.ಜಿ. ಡಿಪ್ಲೋಮಾ ಕೋರ್ಸ್‌ಗಳು :**<br>(ಹಸ್ತಪ್ರತಿಶಾಸ್ತ್ರ ಮತ್ತು ಶಾಬ್ದಬೋಧ (ಎನ್.ಎಲ್.ಪಿ) & ಯೋಗ ವಿಜ್ಞಾನ ಎಂಬ ಮೂರು ವಿಷಯಗಳಲ್ಲಿ ನಡೆಯುತ್ತವೆ.)<br>**Admission Only Through Google Link** | ಬಿ.ಎ/ಎಂ.ಎ ಅಥವಾ ತತ್ಸಮಾನ ಪರೀಕ್ಷೆಗಳಲ್ಲಿ ಉತ್ತೀರ್ಣತೆ. |

1. ಪ್ರವೇಶ ಅರ್ಜಿಯನ್ನು ಭರ್ತಿ ಮಾಡಿ ಒಂದು ತಿಂಗಳ ಒಳಗಾಗಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕು.
2. ಅರ್ಜಿ ಪ್ರತಿಗಳು ಮತ್ತಿತರ ಶೈಕ್ಷಣಿಕ ವಿವರಗಳು ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಲಭ್ಯವಿರುತ್ತದೆ.

ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ **"ಕುಲಸಚಿವರು / ಅಧ್ಯಯನಾಂಗದ ನಿರ್ದೇಶಕರು"** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು–560018' ಇವರ ಕಛೇರಿಯನ್ನು **(ದೂ: 080–26705387/26701303)** ಸಂಪರ್ಕಿಸಬಹುದು ಅಥವಾ ವಿಶ್ವವಿದ್ಯಾಲಯದ ಜಾಲತಾಣ **www.ksu.ac.in** ನಲ್ಲಿ ವಿವರಗಳನ್ನು ಪಡೆಯಬಹುದು.

Sd/-

**ಕುಲಸಚಿವರು (ಪ್ರ)**
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು–560018

ಪ್ರತಿಗಳು:

1. ಡೀನ್, ಶಾಸ್ತ್ರನಿಕಾಯ / ಭಾಷಾನಿಕಾಯ / ವೇದಾಂತ ನಿಕಾಯ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು–18.
2. ವಿಭಾಗಾಧ್ಯಕ್ಷರು, ಸಂಸ್ಕೃತ ಭಾಷೆ ಮತ್ತು ಸಾಹಿತ್ಯ ವಿಭಾಗ, ಹಸ್ತಪ್ರತಿಶಾಸ್ತ್ರ ವಿಭಾಗ, ಅಲಂಕಾರ ಶಾಸ್ತ್ರ ವಿಭಾಗ, ವ್ಯಾಕರಣ ಶಾಸ್ತ್ರ ವಿಭಾಗ, ನ್ಯಾಯಶಾಸ್ತ್ರ ವಿಭಾಗ, ಮತ್ತು ವೇದಾಂತ ವಿಭಾಗ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು–18.
3. ಮಾನ್ಯ ಕುಲಪತಿಗಳ ಆಪ್ತಶಾಖೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು–18.
4. ಮಾನ್ಯ ಕುಲಸಚಿವರ ಆಪ್ತಶಾಖೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು–18.
5. ಹಣಕಾಸು ಅಧಿಕಾರಿಗಳ ಆಪ್ತಶಾಖೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು–18.
6. ಪರೀಕ್ಷಾ ನಿಯಂತ್ರಕರು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು–18.
7. ಪ್ರಾಚಾರ್ಯರು,ಸಂ.ಸ.ಕಾ.ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು–18,
8. ಶಾಸ್ತ್ರ.ಬಿ.ಎ.ಸಂಯೋಜಕರು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು–18,
9. ಸಿಸ್ಟಂ ಅನಾಲಿಸ್ಟ. ಐ.ಟಿ ಸೆಲ್ ಮುಖ್ಯಸ್ಥರು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು–18,
10. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸೂಚನಾ ಫಲಕಗಳು.
11. ಕಛೇರಿ ಪ್ರತಿ ಮತ್ತು ರಕ್ಷತಾ ಪ್ರತಿ